# ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 2 ಎಲ್ ಡಬ್ಲ್ಯೂ ಎ 2023

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 17.01.2023

## ಅಧಿಸೂಚನೆ

ಕರ್ನಾಟಕ ರಾಜ್ಯದಾದ್ಯಂತ "ರೇಷ್ಮೆ ಬಟ್ಟೆಗಳ (ಸಿಲ್ಕ್) ಉದ್ದಿಮೆಗಳಲ್ಲಿ ಉದ್ಯೋಗ" ಅನುಸೂಚಿತ ಉದ್ದಿಮೆಗಳಲ್ಲಿ ತೊಡಗಿರುವ ಕಾರ್ಮಿಕರಿಗೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಿ, ಕನಿಷ್ಠ ವೇತನ ಕಾಯ್ದೆ 1948 (ಕೇಂದ್ರ ಕಾಯ್ದೆ ಸಂಖ್ಯೆ: XI) ರ ಕಲಂ 5(1) (ಬಿ) ರಡಿಯಲ್ಲಿ ರಾಜ್ಯ ಸರ್ಕಾರವು ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ದಿನಾಂಕ: 30.12.2017 ರಂದು ಅಧಿಸೂಚನೆ ಸಂಖ್ಯೆ: ಕಾಇ 22 ಎಲ್ಎಂಡಬ್ಲೂಎ 2017 (ಈ)ನ್ನು ಹೊರಡಿಸಿದ್ದು, ಸದರಿ ಅಧಿಸೂಚನೆಯನ್ನು ಸರ್ಕಾರದ ಆದೇಶ ಸಂಖ್ಯೆ: ಕಾಇ 21 ಎಲ್ಎಂಡಬ್ಲೂ 2017 (1), ಬೆಂಗಳೂರು, ದಿನಾಂಕ: 22.03.2018 ರನ್ವಯ ಹಿಂಪಡೆದು, ಕನಿಷ್ಠ ವೇತನ ಕಾಯ್ದೆ 1948ರ ಕಲಂ 5(1)(ಎ) ರಡಿ ದಿನಾಂಕ: 13.08.2018 ರಂದು ಆದೇಶ ಸಂಖ್ಯೆ: ಕಾಇ 21 ಎಲ್ಎಂಡಬ್ಲೂ 2017 ರಲ್ಲಿ ತ್ರಿಪಕ್ಷೀಯ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಿರುತ್ತದೆ. ಸದರಿ ತ್ರಿಪಕ್ಷೀಯ ಸಮಿತಿಯು ಅನೇಕ ಸಭೆಗಳನ್ನು ನಡೆಸಿ ಬಹುಮತ ಆಧಾರದ ಮೇಲೆ ಕನಿಷ್ಠ ವೇತನ ದರಗಳನ್ನು ಶಿಫಾರಸ್ಸು ಮಾಡಿದ್ದು, ಸರ್ಕಾರವು ಅಧಿಸೂಚನೆ ಸಂಖ್ಯೆ: ಕಾಇ 21 ಎಲ್ಎಂಡಬ್ಲೂ 2017 (ಅ), ದಿನಾಂಕ: 31-10-2019 ಅನ್ನು ಹೊರಡಿಸಿರುತ್ತದೆ.

ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ರಿಟ್ ಅಪೀಲ್ ಸಂಖ್ಯೆ: 1611/2019 ಮತ್ತು ಇತರೆ ಪ್ರಕರಣಗಳಲ್ಲಿ ಹೊರಡಿಸಿರುವ ತೀರ್ಪಿನಲ್ಲಿ ಈ ಕೆಳಕಂಡಂತೆ ನಿರ್ದೇಶಿಸಿರುತ್ತದೆ.

***the notifications dated 31st October 2019 in relation to the employments covered by the four notifications subject matter of the order dated 22nd March 2018, are rendered inoperative;***

***This order will not prevent the aggrieved parties from challenging the three revived final notifications dated 30th December 2017 in accordance with law. Moreover, it will be always open for the State Government to undertake the revision of the rates of minimum wages fixed under the said three notifications dated 30th December 2017 in accordance with the provisions of the said Act:***

ಮುಂದುವರಿದು, ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 9268/2020 ಪ್ರಕರಣದಲ್ಲಿ ದಿನಾಂಕ: 09.02.2021 ರಂದು ಹೊರಡಿಸಿರುವ ತೀರ್ಪಿನಲ್ಲಿ ಈ ಕೆಳಗಿನಂತೆ ನಿರ್ದೇಶಿಸಿರುತ್ತದೆ;

*The matter is remitted back to the hands of the State Government to consider the representation dated 25-5-2020 in accordance with law. It is needless to observe that the State Government will have to consider the representation given by the petitioner which is in exercise of liberty given by the Hon'ble Division Bench at direction No (iii.)*

ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯದ ತೀರ್ಪು ಹಾಗೂ ಕಾನೂನು ಇಲಾಖೆಯ ಅಭಿಪ್ರಾಯಗಳ ಹಿನ್ನೆಲೆಯಲ್ಲಿ, ಮಂಡಳಿಯ ಸಭೆಯನ್ನು ದಿನಾಂಕ: 11.01.2022ರಂದು ಹಾಗೂ ಭಾಗೀದಾರರ ಸಭೆಯನ್ನು ದಿನಾಂಕ: 6.9.2022 ರಂದು ನಡೆಸಲಾಗಿರುತ್ತದೆ. ಎರಡೂ ಸಭೆಗಳಲ್ಲಿ ದಿನಾಂಕ: 31.10.2019 ರಂದು ಹೊರಡಿಸಲಾದ ಅಧಿಸೂಚನೆಯಲ್ಲಿರುವ ದರಗಳನ್ನೇ ಜಾರಿಗೆ ತರುವಂತೆ ಉದ್ಯೋಗದಾತರ ಪ್ರತಿನಿಧಿಗಳು ಕೋರಿದ್ದು, ದಿನಾಂಕ: 30.12.2017ರ ಅಧಿಸೂಚನೆಯಲ್ಲಿರುವ ದರಗಳನ್ನು ಜಾರಿಗೆ ತರುವಂತೆ ಕಾರ್ಮಿಕ ವರ್ಗದ ಪ್ರತಿನಿಧಿಗಳು ಕೋರಿರುತ್ತಾರೆ. ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯದ ತೀರ್ಪು ಹಾಗೂ ಉಭಯತ್ರಯರ ಹಿತವನ್ನು ಗಮನದಲ್ಲಿಟ್ಟುಕೊಂಡು, ದಿನಾಂಕ: 23.11.2022 ರಂದು ಮಾನ್ಯ ಕಾರ್ಮಿಕ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ದಿನಾಂಕ: 31.10.2019 ರ ಅಧಿಸೂಚನೆಯ ದರಗಳ ಮೇಲೆ ಶೇ. 14 ರಷ್ಟು ಏರಿಕೆ ಮಾಡುವುದು ಸೂಕ್ತವೆಂದು ತೀರ್ಮಾನಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಾದ್ಯಂತ "ರೇಷ್ಮೆ ಬಟ್ಟೆಗಳ (ಸಿಲ್ಕ್) ಉದ್ದಿಮೆಗಳಲ್ಲಿ ಉದ್ಯೋಗ" ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ದಿನಾಂಕ: 30.12.2017 ರಿಂದ ಅನ್ವಯವಾಗುವಂತೆ ಈ ಕೆಳಕಂಡ ಕೋಷ್ಟಕದಲ್ಲಿರುವಂತೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಕನಿಷ್ಠ ವೇತನ ಕಾಯ್ದೆ-1948 ರ ಕಲಂ 12 ರನ್ವಯ ಹಾಗೂ ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂ. 9268/2020 ಪ್ರಕರಣದಲ್ಲಿ ದಿನಾಂಕ: 9.2.2021 ರಂದು ಹೊರಡಿಸಿದ ತೀರ್ಪಿನಲ್ಲಿ ನೀಡಿರುವ ನಿರ್ದೇಶನಗಳನ್ವಯ ವೇತನ ಪಾವತಿಸಲು ಸಂಬಂಧಿಸಿದ ಎಲ್ಲಾ ಉದ್ಯೋಗದಾತರು ಬಾಧ್ಯಸ್ಥರಾಗಿರುತ್ತಾರೆ.

"ಕನಿಷ್ಠ ವೇತನ ದರಗಳ ಕೋಷ್ಟಕ"

| | ರೇಷ್ಮೆ ಬಟ್ಟೆಗಳ (ಸಿಲ್ಕ್) ಉದ್ದಿಮೆಗಳಲ್ಲಿ ಉದ್ಯೋಗ | | |
|---|---|---|---|
| | ಕೆಲಸದ ವರ್ಗೀಕರಣ | ದಿನಕ್ಕೆ | ತಿಂಗಳಿಗೆ |
| | ಗ್ರೂಪ್ 1 ಸಿಲ್ಕ್ ಚರಕ ಮತ್ತು ಸಿಲ್ಕ್ ಫಿಲೇಚರ್ ಎಸ್ಟಾಬ್ಲಿಷ್‌ಮೆಂಟ್ | | |
| I | <u>ಅತಿ ಕುಶಲ ಕಾರ್ಮಿಕರು</u><br>ಪ್ರೆಸ್ಸರ್ಸ್, ಗ್ಯಾಸರ್ಸ್, ಗ್ಯಾಸ್ ಪ್ಲಾಂಟ್ ಅಟೆಂಡರ್, ಇತರೆ ಅತಿಕುಶಲ ಕೆಲಸಕ್ಕೆ | 432.16 | 11236.09 |

| | | | |
|---|---|---|---|
| | <u>ಕುಶಲ ಕಾರ್ಮಿಕರು</u><br>ಚರಕ ರೀಲರ್ಸ್ / ರೀಲರ್ಸ್ ಫೈರ್‌ಮ್ಯಾನ್ (ಚಾರ್ಜ್ ಮನ್) ಟ್ವಿಸ್ಟರ್, ಗಿಲ್ ರೋವಿಂಗ್ ಟೆಂಟರ್ಸ್, ರಿಂಗ್ ಫ್ರೇಂ ಬಾಯ್ಸ್, ಬ್ಯಾಂಡರ್ಸ್, ಗ್ಯಾಸ್ ಪಿನ್ನರ್ಸ್, ಸಾಯ್ಲಿಂಗ್ ಸ್ಪಿನ್ನಿಂಗ್ ಬಾಯ್ಸ್, ಕೂಂಬ್ ಸ್ಪಿನ್ನರ್ಸ್ ಇತರೆ ಕುಶಲ ಕೆಲಸಕ್ಕೆ | 425.23 | 11056.05 |
| | <u>ಅರೆ ಕುಶಲ ಕಾರ್ಮಿಕರು</u><br>ಚರಕ ಟರ್ನರ್ಸ್, ಸ್ಪಿನ್ನರ್ಸ್, ಸಿಲ್ಕ್‌ವೇಸ್ಟ್ ಕ್ಲೀನರ್ಸ್, ಸಿಲ್ಕ್ ಪ್ಯಾಕರ್ಸ್. ಟ್ವಿಸ್ಟರ್ಸ್, ಹ್ಯಾಂಕ್ ಮೇಕರ್ಸ್, ಡ್ರೈಯರ್ಸ್, ವೇಸ್ಟ್ ಪಿಕ್ಕರ್ಸ್, ಆಯಿಲ್ ಫಿಲ್ಲರ್ಸ್, ತೂಕ ಮಾಡುವವರು, ಡ್ರಾಫ್ಟ್ ಪಿಕ್ಕರ್ಸ್, ಬಂಡ್ಲರಸ್ ಮತ್ತು ಪ್ಯಾಕರ್ಸ್, ಇತರ ಅರೆಕುಶಲ ಕೆಲಸಕ್ಕೆ | 402.52 | 10465.42 |
| | ಗ್ರೂಪ್ 2. ಟ್ವಿಸ್ಟಿಂಗ್ ಸೆಕ್ಷನ್ (ಪ್ಯೂರ್ ಸಿಲ್ಕ್ ಅಂಡ್ ಆರ್ಟ್ ಸಿಲ್ಕ್) | | |
| II | <u>ಕುಶಲ ಕಾರ್ಮಿಕರು</u><br>ವಾರ್ಪರ್ಸ್, ಟ್ವಿಸ್ಟಿಂಗ್ ಅಸಿಸ್ಟೆಂಟ್ , ಇತರೆ ಕುಶಲ ಕೆಲಸಕ್ಕೆ | 426.77 | 11095.91 |
| | ಅರೆ ಕುಶಲ ಕಾರ್ಮಿಕರು<br>ವೈಂಡರ್ಸ್, ಟ್ವಿಸ್ಟರ್ಸ್, ಡಬ್ಲರ್ಸ್, ರೀಲರ್ಸ್, ಇತರೆ ಅರೆಕುಶಲ ಕೆಲಸಕ್ಕೆ | 402.52 | 10465.42 |
| | ಗ್ರೂಪ್ 3. ವೀವಿಂಗ್, ಕ್ಯಾಲೆಂಡರಿಂಗ್ ಮತ್ತು ಪ್ರೋಸೆಸಿಂಗ್ | | |
| III | <u>ಅತಿ ಕುಶಲ ಕಾರ್ಮಿಕರು</u><br>ಹೆಡ್ ಡಿಸೈನರ್ , ವೀವರ್ಸ್ ಡಾಬಿ ವಿತ್ ಡ್ರಾಪ್ ಬಾಕ್ಸ್, ವೀವರ್ಸ್ (ಜೆಕಾರ್ಡ್), ಇತರೆ ಫ್ಯಾನ್ಸಿ ವೀವರ್ಸ್, ಇತರೆ ಅತಿಕುಶಲ ಕೆಲಸಕ್ಕೆ | 509.21 | 13239.39 |
| | <u>ಕುಶಲ ಕಾರ್ಮಿಕರು</u><br>ಹೈಸ್ಪೀಡ್ ವಾರ್ಪರ್ಸ್, ಡಿಸೈನರ್, ನಾಟರ್ಸ್ ಅಥವಾ ಪೀಸರ್ಸ್, ಲೇಸ್ ರ್ಯಾಪರ್ಸ್, ಪ್ಲೇನ್ ಕಾರ್ಪೆಟ್ ವೀವರ್ಸ್, ಫಿನಿಶರ್ಸ್, ಪ್ರಿಂಟಿಂಗ್ ಮಿಷಿನ್ ಮ್ಯಾನ್, ಫ್ರಂಟ್ ಕ್ಯಾಲೆಂಡರ್ ಮ್ಯಾನ್, ಎಡಿಟಿಂಗ್ ಮ್ಯಾನ್, ಡೆವೆಲಪಿಂಗ್ ಮ್ಯಾನ್, ಕಾಂಟ್ರಾಸ್ಟ್ ಪಲ್ಲು ಪ್ರಿಪರೇಟರ್ಸ್ ಮತ್ತು ಡೈಯರ್ಸ್ ಇತರೆ ಕುಶಲ ಕೆಲಸಕ್ಕೆ | 426.77 | 11095.91 |
| | <u>ಅರೆ ಕುಶಲ ಕಾರ್ಮಿಕರು</u><br>ಪರ್ನ್ ವೈಂಡರ್, ವಾರ್ಪ್ ಸಹಾಯಕರು, ಕಾರ್ಡ್ ಪಂಚರ್ಸ್, ಕಾರ್ಡ್ ಲೇಸರ್ಸ್, ಬ್ಯಾಕ್ ಸೈಜರ್ಸ್, ಬಟ್ಟೆ ಪರಿವೀಕ್ಷಕರು, ಹ್ಯಾಂಡ್ ಮತ್ತು ಮಿಷನ್ ಫೋಲ್ಡರ್ , ಬ್ಯಾಕ್ ಕ್ಯಾಲೆಂಡರ್ ಮ್ಯಾನ್, ಹ್ಯಾಂಡ್ ಸೀವರ್, ಸ್ಟಿಚ್ಚರ್, ಮಾರ್ಕರ್, ಬಂಡ್ಲರ್, ಪ್ರಿಂಜರ್, ಹ್ಯಾಂಡ್ ಐರನಿಂಗ್ ಮ್ಯಾನ್, ಮಿಷನ್ ಮ್ಯಾನ್ ಸಹಾಯಕರು, ಸ್ಕೇಪಿಂಗ್ ಮಿಷನ್ ಮ್ಯಾನ್, ವಿಂಚ್ ಮ್ಯಾನ್, ಕಿರ್‌ಮ್ಯಾನ್, ಸ್ಟೆಂಟರ್ ಮಿಷನ್ ಮ್ಯಾನ್, ವಾಡಿಂಗ್ ಮ್ಯಾನ್, ಬ್ಲೀಚಿಂಗ್ ಮ್ಯಾನ್, ಹೈಡ್ರೋ ಎಕ್ಸ್ಟ್ರ್ಯಾಕ್ಟರ್ ಮೆಷಿನ್‌ಮ್ಯಾನ್, ಇತರೆ ಅರೆಕುಶಲ ಕೆಲಸಕ್ಕೆ | 402.52 | 10465.42 |
| | ಗ್ರೂಪ್ 4. ಮೇಂಟೆನೆನ್ಸ್ (ಪವರ್ ಪ್ಲಾಂಟ್ ಅಂಡ್ ವರ್ಕ್ ಶಾಪ್) | | |
| <u>IV</u> | <u>ಅತಿ ಕುಶಲ ಕಾರ್ಮಿಕರು</u><br>ಮೇಸ್ತ್ರಿ, ಜಾಬರ್, ಇತರೆ ಅತಿಕುಶಲ ಕೆಲಸಕ್ಕೆ | 436.80 | 11356.75 |
| | <u>ಕುಶಲ ಕಾರ್ಮಿಕರು</u><br>ವೈರ್‌ಮ್ಯಾನ್, ಫಿಟ್ಟರ್, ಬ್ಲಾಕ್‌ಸ್ಮಿತ್, ಟರ್ನರ್, ಶೇಪರ್ಸ್, ಪ್ಲಂಬರ್, ಬಾಯ್ಲರ್ ಅಟೆಂಡರ್, ಕಾರ್ಪೆಂಟರ್, ಮೆಕ್ಯಾನಿಕ್, ವೆಲ್ಡರ್, ಇಂಜಿನ್ ಡ್ರೈವರ್, ಎಲೆಕ್ಟ್ರಿಷಿಯನ್, ಮೆಕ್ಯಾನಿಕಲ್ ಫೋರ್ ಮ್ಯಾನ್, ಮೇಸನ್ ಮತ್ತು ಇತರೆ ಕುಶಲ ಕೆಲಸಕ್ಕೆ | 432.90 | 11255.35 |

| | | | |
|---|---|---|---|
| | <u>ಅರೆ ಕುಶಲ ಕಾರ್ಮಿಕರು</u><br>ಪಂಪ್ ಮ್ಯಾನ್, ಫೈಯರ್ ಮ್ಯಾನ್, ಆಯಿಲ್‌ಮ್ಯಾನ್, ಕಾಬ್ಲರ್ ಮತ್ತು ಇತರೆ ಅರೆಕುಶಲ ಕೆಲಸಕ್ಕೆ | 417.57 | 10856.84 |
| | ಗ್ರೂಪ್ 5. ಜನರಲ್ ಅಡ್ಮಿನಿಸ್ಟ್ರೇಷನ್ | | |
| <u>V</u>. | <u>ಕುಶಲ ಕಾರ್ಮಿಕರು</u><br>ಮೇಸ್ತ್ರಿ, ಜಾಬರ್, ಟೈಮ್‌ಕೀಪರ್, ಕ್ಯಾಷಿಯರ್, ಅಕೌಂಟೆಂಟ್ ಮತ್ತು ಇತರೆ ಕುಶಲ ಕೆಲಸಕ್ಕೆ | 498.82 | 12969.34 |
| | ಅರೆಕುಶಲ ಕಾರ್ಮಿಕರು<br>ವಾಟರ್‌ಮ್ಯಾನ್, ಸ್ಟೋರ್‌ಕೀಪರ್, ಗುಮಾಸ್ತ, ಬೆರಳಚ್ಚುಗಾರ ಮತ್ತು ಇತರೆ ಅರೆಕುಶಲ ಕೆಲಸಕ್ಕೆ | 425.10 | 11052.55 |
| | <u>ಅಕುಶಲ ಕಾರ್ಮಿಕರು</u><br>ಮಜ್ದೂರ್, ಪ್ಯೂನ್, ವಾಚ್‌ಮನ್, ಮಾಲಿ, ಸ್ವೀಪರ್, ಹೆಲ್ಪರ್ ಮತ್ತು ಇತರೆ ಅಕುಶಲ ಕೆಲಸಕ್ಕೆ | 402.52 | 10465.42 |

ಮೇಲ್ಕಂಡ ಕನಿಷ್ಠ ವೇತನ ದರಗಳನ್ನು ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನಿಗದಿಪಡಿಸಿದ್ದು, ಈ ಎಲ್ಲಾ ಷರತ್ತುಗಳನ್ನು ಯಥಾವತ್ತಾಗಿ ಉದ್ಯೋಗದಾತರು ಪಾಲಿಸಲು ಬಾಧ್ಯಸ್ಥರಿರುತ್ತಾರೆ;

1. ವ್ಯತ್ಯಾಸವಾಗುವ ತುಟ್ಟಿಭತ್ಯೆ:-

ತುಟ್ಟಿಭತ್ಯೆ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಮಾಡಲಾಗುತ್ತದೆ. ಹಿಂದಿನ ಕ್ಯಾಲೆಂಡರ್ ವರ್ಷದ ಹನ್ನೆರಡು (12) ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ಸರಾಸರಿ ಆಧಾರದ ಮೇಲೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರತಿ ವರ್ಷ ಲೆಕ್ಕಾಚಾರ ಮಾಡತಕ್ಕದ್ದು. ಅಲ್ಲದೇ ಗ್ರಾಹಕ ಬೆಲೆ ಸೂಚ್ಯಂಕಗಳ ಸಂಖ್ಯೆಯ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ಲೆಕ್ಕ ಹಾಕಲಾಗುತ್ತದೆ. ಗ್ರಾಹಕ ಬೆಲೆ ಸೂಚ್ಯಾಂಕ 6537 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ ನಾಲ್ಕು (4) ಪೈಸೆಯಂತೆ ತುಟ್ಟಿ ಭತ್ಯೆಯನ್ನು ಪಾವತಿಸತಕ್ಕದ್ದು.

ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:-

ಅ) ಮಾಸಿಕ ವೇತನವನ್ನು ಪಡೆಯುವವರು:-

ತಿಂಗಳ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x 30 ದಿನಗಳು

ದಿನಗೂಲಿ ಗಳಿಕೆದಾರರ ಸಂದರ್ಭದಲ್ಲಿ ಮಾಸಿಕ ವೇತನ ದರಗಳನ್ನು ಇಪ್ಪತ್ತಾರು (26) ದಿನಗಳಿಂದ ವಿಭಾಗಿಸಿ, ನಾಲ್ಕು (4) ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿದಂತೆ ಈ ಕೆಳಕಂಡಂತೆ ಲೆಕ್ಕ ಹಾಕತಕ್ಕದ್ದು. ಭಾಗಿಸಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸುವುದು.

ಆ) ದಿನಗೂಲಿ ವೇತನ ಪಡೆಯುವವರು :-

ದಿನದ ತುಟ್ಟಿಭತ್ಯೆ = <u>ಪ್ರತಿ ವರ್ಷ ಹೆಚ್ಚಾಗುವ ಅಂಶಗಳು x ತುಟ್ಟಿಭತ್ಯೆಯ ದರ x 30 ದಿನಗಳು</u>

2. ಮಹಿಳೆಯರು, ಪುರುಷರು ಮತ್ತು ತೃತೀಯ ಲಿಂಗಿಗಳು ಒಂದೇ ರೀತಿಯ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಎಲ್ಲರಿಗೂ ಸಮಾನ ದರದ ವೇತನಗಳನ್ನು ಸಂದಾಯ ಮಾಡತಕ್ಕದ್ದು.

3. ಅಧಿಸೂಚನೆಯಲ್ಲಿ ವರ್ಗವನ್ನು ನಮೂದಿಸದೆ ಇರುವ ವರ್ಗಗಳ ಕಾರ್ಮಿಕರಿಗೆ ಅದೇ ಸ್ವರೂಪದ ಕೆಲಸ ನಿರ್ವಹಿಸುತ್ತಿರುವ ಇತರೆ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಸಂದಾಯ ಮಾಡತಕ್ಕದ್ದು.

4. ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ 8 ಗಂಟೆಗಳ ಕೆಲಸದ ವೇತನವು ಅದೇ ತರಹದ ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರಕೂಡದು. ಒಂದು ದಿನದ ಕೆಲಸ ಎಂದರೆ 8 ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು 8 ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಂತಹ ಕಡಿಮೆ ಅವಧಿಗೆ ಅನುಗುಣವಾಗಿ ವೇತನವನ್ನು ಆ ವರ್ಗದ ದಿನದ ಅಥವಾ ತಿಂಗಳ ವೇತನದ ಆಧಾರದ ಮೇಲೆ ಲೆಕ್ಕ ಹಾಕುವುದು.

5. ದಿನಗೂಲಿ ನೌಕರರಿಗೆ ಅವರ ದಿನದ ವೇತನ ದರಗಳನ್ನು ಕಂಡು ಹಿಡಿಯಬೇಕಾದಲ್ಲಿ, ತಿಂಗಳ ವೇತನ ದರವನ್ನು 26 ದಿನಗಳಿಂದ ಭಾಗಿಸಬೇಕು. ಭಾಗಿಸಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸುವುದು.

6. ಸಂಸ್ಥೆಯಲ್ಲಿ ನಿಗದಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಕಾಯ್ದೆ ಮತ್ತು ನಿಯಮಗಳಿಗೆ ಒಳಪಟ್ಟು ಸಾಮಾನ್ಯ ವೇತನದ ಎರಡು ಪಟ್ಟು ವೇತನವನ್ನು ಪಾವತಿ ಮಾಡತಕ್ಕದ್ದು.

7. ಕೆಲಸಗಾರರು ದಿನದ ನಿಗದಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಹೆಚ್ಚುವರಿ ಅವಧಿ ಕೆಲಸಕ್ಕೆ ಆತನ ವೇತನದ ಎರಡು ಪಟ್ಟು ವೇತನವನ್ನು ಪಾವತಿಸತಕ್ಕದ್ದು.

8. ವೇತನ ಲೆಕ್ಕಾಚಾರದಲ್ಲಿ ಚಿಲ್ಲರೆ ಬಂದ ಪಕ್ಷದಲ್ಲಿ ಅದನ್ನು ಸಮೀಪದ 50 ಪೈಸೆಗೆ ಪೂರ್ಣಗೊಳಿಸುವುದು.

9. ಟ್ರೈನಿಗಳಿಗೆ ಆ ವರ್ಗದ ನೌಕರರು ಪಡೆಯುತ್ತಿರುವ ವೇತನದ ಪ್ರತಿಶತ 75 ರಷ್ಟು ವೇತನವನ್ನು ಶಿಷ್ಯ ವೇತನವನ್ನಾಗಿ ಪಾವತಿಸತಕ್ಕದ್ದು.

10. ನೌಕರರುಗಳ ವೇತನವನ್ನು ಚೆಕ್ ಮೂಲಕ ಪಾವತಿಸುವುದು ಅಥವಾ ನೌಕರರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡತಕ್ಕದ್ದು.

11. ಈ ಅಧಿಸೂಚನೆಯಲ್ಲಿ ನಮೂದಿಸಿದ ಉದ್ಯೋಗಗಳನ್ನು ನಾಲ್ಕು ಪ್ರವರ್ಗಗಳನ್ನಾಗಿ ವಿಂಗಡಿಸಿದ್ದು, ಪ್ರತಿ ಪ್ರವರ್ಗದ ವ್ಯಾಖ್ಯಾನವು ಕೆಳಗಿನಂತಿರುತ್ತದೆ;

i) ಅಕುಶಲ ಕಾರ್ಮಿಕರು (Un-skilled Workers)

ಅಕುಶಲ ಕಾರ್ಮಿಕರೆಂದರೆ ದೈಹಿಕ ಶ್ರಮದ ಆಧಾರದ ಮೇಲೆ ಕೆಲಸ ನಿರ್ವಹಿಸುವ ಕಾರ್ಮಿಕರಾಗಿದ್ದು, ವೈಯಕ್ತಿಕ ನಿರ್ಣಯ ಹಾಗೂ ಪೂರ್ವ ಅನುಭವದ ಅವಶ್ಯಕತೆಯಿಲ್ಲದ ಸರಳ ಕರ್ತವ್ಯವನ್ನು ನಿರ್ವಹಿಸುವ ಕಾರ್ಮಿಕರಾಗಿರುತ್ತಾರೆ. ಉದ್ಯೋಗ / ವೃತ್ತಿಯ ಪರಿಸರದ ಪರಿಚಯ ಮತ್ತು ದೈಹಿಕ ಶ್ರಮ ಇಲ್ಲಿ ಮುಖ್ಯ ಅಂಶವಾಗಿರುತ್ತದೆ.

ii) ಅರೆ ಕುಶಲ ಕಾರ್ಮಿಕರು (Semi Skilled Workers)

ಅರೆ ಕುಶಲ ಕಾರ್ಮಿಕರೆಂದರೆ ವೈಯಕ್ತಿಕ ನಿರ್ಣಯಕ್ಕೆ ಹೆಚ್ಚು ಅವಕಾಶವಿಲ್ಲದ ನಿರ್ದಿಷ್ಟ ನಿಯತ ಕ್ರಮದ ಪುನರಾವರ್ತನೆಯ ಕೆಲಸಗಳನ್ನು ನಿರ್ವಹಿಸುವ ಕಾರ್ಮಿಕರಾಗಿರುತ್ತಾನೆ. ಕಾರ್ಮಿಕರ ಕೆಲಸವು ನಿರ್ದಿಷ್ಠ ಮಿತಿಯನ್ನು ಹೊಂದಿದ್ದು, ಇನ್ನೊಬ್ಬ ವ್ಯಕ್ತಿಯ ತೀರ್ಮಾನಕ್ಕೆ ಅನುಗುಣವಾಗಿ ನಿರ್ವಹಿಸುವ ಕೆಲಸವಾಗಿರುತ್ತದೆ. ಹಾಗೂ ಯಂತ್ರಗಳ ಸಹಾಯದಿಂದ ನಿರ್ವಹಿಸುವ ಸರಳ ಕೆಲಸಗಳನ್ನು ಮಾಡುವವರಾಗಿರುತ್ತಾರೆ.

iii) ಕುಶಲ ಕಾರ್ಮಿಕರು (Skilled Workers)

ಕುಶಲ ಕಾರ್ಮಿಕರು ತಮ್ಮ ಸ್ವಂತ ನಿರ್ಣಯ, ತೀರ್ಮಾನ ಮತ್ತು ವಿವೇಚನೆಗೆ ಒಳಪಟ್ಟು ಜವಾಬ್ದಾರಿಯುತ ಕರ್ತವ್ಯಗಳನ್ನು ನಿರ್ವಹಿಸುವ ಕಾರ್ಮಿಕರಾಗಿರುತ್ತಾರೆ. ತಮ್ಮ ವೃತ್ತಿ ಮತ್ತು ಉದ್ಯೋಗದ ಬಗ್ಗೆ ಆಳವಾದ ಮತ್ತು ಅಮೂಲಾಗ್ರ ಜ್ಞಾನವನ್ನು ಹೊಂದಿದ ಕಾರ್ಮಿಕರಾಗಿರುತ್ತಾರೆ. ಸದರಿ ಉದ್ಯೋಗ ಮತ್ತು ವೃತ್ತಿಯ ಬಗ್ಗೆ ವಿದ್ಯಾರ್ಹತೆ ಪರಿಣಿತಿ ಮತ್ತು ಅನುಭವ ಹೊಂದಿರುತ್ತಾರೆ.

iv) ಅತಿ ಕುಶಲ ಕಾರ್ಮಿಕರು (Highly Skilled Workers)

ಅತಿ ಕುಶಲ ಕಾರ್ಮಿಕರೆಂದರೆ ಕರ್ತವ್ಯವನ್ನು ನಿರ್ವಹಿಸಲು ದಕ್ಷತೆ ಮತ್ತು ಅತೀವ ಸಾಮರ್ಥ್ಯ ಇರುವ ಕಾರ್ಮಿಕರಾಗಿದ್ದು, ಕುಶಲ ಕಾರ್ಮಿಕರ ಸಹಿತ ಎಲ್ಲಾ ಕಾರ್ಮಿಕರ ಕರ್ತವ್ಯಗಳ ಮೇಲ್ವಿಚಾರಣೆ ನಡೆಸಿ ಪರಿಣಾಮಕಾರಿಯಾಗಿ ಫಲಿತಾಂಶವನ್ನು ಸಾಧಿಸಲು ಶಕ್ತರಾಗಿರುವ ಕಾರ್ಮಿಕರಾಗಿರುತ್ತಾರೆ ಹಾಗೂ ಸದರಿ ಉದ್ಯೋಗ ಮತ್ತು ವೃತ್ತಿಯ ಬಗ್ಗೆ ವಿಶೇಷ ಜ್ಞಾನ ಮತ್ತು ಪರಿಣಿತಿಯನ್ನು ಹೊಂದಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

A-Umadevi
(ಎ. ಉಮಾದೇವಿ) 17/1/2023
ಪೀಠಾಧಿಕಾರಿ-2,
ಕಾರ್ಮಿಕ ಇಲಾಖೆ (ಕನಿಷ್ಠ ವೇತನ)

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಈ ಅಧಿಸೂಚನೆಯನ್ನು ಇ - ರಾಜ್ಯಪತ್ರದಲ್ಲಿ (E-Gazzette) ಪ್ರಕಟಿಸಲು ಕೋರಲಾಗಿದೆ.

1. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟರಸ್ತೆ, ಬೆಂಗಳೂರು-29.
2. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ (ಕಾರ್ಮಿಕ ಆಯುಕ್ತರ ಮೂಲಕ).
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು (ಕಾರ್ಮಿಕ ಆಯುಕ್ತರ ಮೂಲಕ).

4. ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ವಾರ್ತಾ ಭವನ, ಇನ್ ಫೆಂಟ್ರಿ ರಸ್ತೆ, ಬೆಂಗಳೂರು
5. ಸದಸ್ಯ ಕಾರ್ಯದರ್ಶಿ, ಕರ್ನಾಟಕ ಕನಿಷ್ಠ ವೇತನ ಸಲಹಾ ಮಂಡಳಿ, ಕಾರ್ಮಿಕ ಆಯುಕ್ತರ ಕಛೇರಿ, ಕಾರ್ಮಿಕ ಭವನ, ಬೆಂಗಳೂರು.
6. ಎಲ್ಲಾ ಜಿಲ್ಲೆಗಳ ಕಾರ್ಮಿಕ ಅಧಿಕಾರಿಗಳಿಗೆ (ಕಾರ್ಮಿಕ ಆಯುಕ್ತರ ಮೂಲಕ)
7. ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿ.

ಪ್ರತಿಗಳು:

1. ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು
2. ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ
3. ಸರ್ಕಾರದ ಉಪ ಕಾರ್ಯದರ್ಶಿರವರ ಆಪ್ತ ಸಹಾಯಕರು, ಕಾರ್ಮಿಕ ಇಲಾಖೆ